ಹೀಗೇ ವರ್ಷಗಳುರುಳಿದ್ದವು. ಮತ್ತೆ ಒಂದು ದಿನ...

ದೇವೇಂದ್ರ ನದಿಯ ಬಳಿ ಕಾಣಿಸಿಕೊಂಡ!

ಇನ್ನೊಬ್ಬ ಜೊತೆಗಾತಿಯೊಂದಿಗೆ, ಮರದ ಪೊದೆಯ ಮರೆಯಲ್ಲಿ!... ಕಾಲ ಅವನ ಮೇಲೆ ಯಾವ ಪರಿಣಾಮವನ್ನೂ ಬೀರಿರಲಿಲ್ಲ. ಅದೇ ಕಳೆಕಳೆಯಾದ ಮುಖ, ಯೌವ್ವನದ ಮದ ತುಂಬಿದ ದೇಹ, ಮಾಂಸಲ ರೋಮಭರಿತ ತೋಳುಗಳು, ಕಣ್ಣುಗಳು, ಅದೇ ರಸಿಕತೆ, ತುಟಿಗಳಲ್ಲಿ ತುಂಟ ಹೂ ನಗು! ಯಾವುದೂ ಕುಗ್ಗಿಲ್ಲ, ಕುಂದಿಲ್ಲ!

ತಾನು?... ಮುದುಕಿಯಾಗಿ ಬಿಟ್ಟಿದ್ದೇನಲ್ಲ!

ನನ್ನ ಬಡನಡು ಸ್ಥೂಲವಾಗಿದೆ. ಬೆನ್ನು ಬಾಗಿದೆ. ನೀಳಕೇಶರಾಶಿ ಬೆಳ್ಳಿಯ ಬಣ್ಣವಾಗಿದೆ. ಕೆನ್ನೆಗಳಲ್ಲಿ ರಂಗು, ಕಣ್ಣಲ್ಲಿ ಹೊಳಪು, ಚರ್ಮದಲ್ಲಿ ಕಾಂತಿ, ಯಾವುದೂ ಉಳಿದಿಲ್ಲ ತನ್ನಲ್ಲಿ ಈಗ!

ಎದುರಿಗೇ ಹೋದರೂ ಇಂದ್ರ ಗುರುತಿಸಲಾರ ಎನ್ನಿಸಿದಾಗ ತನಗಾದ ಹಿಂಸೆಯೆಷ್ಟು?

ಸದ್ದು ಮಾಡದೆ ಹಿಂದಿರುಗಿ ಬಂದು ಬಿಟ್ಟಿದ್ದಳು.

ಅದು ಹೇಗೋ, ಇಂದ್ರ ಆಶ್ರಮದ ಬಳಿ ಬಂದಿದ್ದ ಸುದ್ದಿ ಗೌತಮರಿಗೆ ಗೊತ್ತಾಗಿತ್ತು.

ಅಂದಿನಿಂದಲೇ ಅಲ್ಲವೇ ಅವರು ಹಾಸಿಗೆ ಹಿಡಿದಿದ್ದು? ತನಗೆ ಸ್ಪಷ್ಟವಾಗಿ ತಿಳಿದಿತ್ತು. ಗೌತಮರ ಅನಾರೋಗ್ಯದ ಕಾರಣ!

ಆದರೆ, ಅದಕ್ಕೆ ಔಷಧವಾದರೂ ಏನು? ಈ ವೃದ್ಧಾಪ್ಯದಲ್ಲಿ ತಾನು ಪರಪುರುಷನ ಸಂಗ ಮಾಡಬಲ್ಲೆನೇ?

ಅಷ್ಟು ಕೂಡಾ ತಿಳಿಯಲಾರದೆ ಹೋಯಿತಲ್ಲ ಇವರಿಗೆ? ಅನುಮಾನವೆಂಬ ಭೂತಕ್ಕೆ ಮದ್ದಿಲ್ಲ.

ಗೌತಮರ ಕೃಶವಾದ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು, ಸವರುತ್ತಲೇ ಇದ್ದ ಅಹಲ್ಯೆಯ ಕಂಗಳಿಂದ ಅಶ್ರುಧಾರೆಯೇ ಸುರಿದಿತ್ತು!

ಗೌತಮರು ಮೆಲ್ಲಗೆ ಕದಲಿದರು. ನಿತ್ರಾಣವಾಗಿ ತಲೆಯಲುಗಿಸಿ, ದುರ್ಬಲ ಸ್ವರದಲ್ಲಿ ಕರೆದರು 'ಅಹಲ್ಯಾ...'

ತಕ್ಷಣ ಮುಂದೆ ಬಾಗಿದಳು.

ಏನೋ ಹೇಳಲು ಹೊರಟವರು ಶ್ವೇತಾಂಬರಿಯನ್ನು ನೋಡಿ ಸುಮ್ಮನಾದರು.

ಅಹಲ್ಯೆ ಅವಳಿಗೆ ಹೊರಹೋಗುವಂತೆ ಸನ್ನೆ ಮಾಡಿದಳು.

ಅನಂತರ ಮೃದುವಾದ ಧ್ವನಿಯಲ್ಲಿ ಕೇಳಿದಳು...

'ಏನು ಹೇಳಿ? ನಾನು ಇಲ್ಲೇ ಇದ್ದೇನೆ!'

'ಆ... ಅಹಲ್ಯಾ , ಮತ್ತೆ ಬಂ... ದಿದ್ದನಲ್ಲವೇ.. ಅವನು?'

'ಹೌದು ಬಂದಿದ್ದ, ಆದರೆ ನನಗಾಗಿ ಅಲ್ಲ!'

'ಸು... ಸುಳ್ಳು ಹೇಳಬೇಡ ಅ... ಹಲ್ಯಾ.'

'ನಿಮ್ಮಾಣೆಗೂ ಸುಳ್ಳಲ್ಲ.'

ಅಹಲ್ಯೆಯ ಧ್ವನಿ ಗದ್ಗದಿತವಾಯಿತು. ಈ ಸ್ಥಿತಿಯಲ್ಲೂ ಅನುಮಾನವೇ? ನಿಜವನ್ನೇ ಹೇಳಿದರೂ ನಂಬದ ಸ್ಥಿತಿಯಲ್ಲಿರುವವರನ್ನು ನಂಬಿಸುವುದ್ಹೇಗೆ?

'ಅ... ಅಹಲ್ಯ...'

'ಆ ದಿನ... ನಸುಕಿನಲ್ಲಿ... ಅವನು ನಿನ್ನ ಬಳಿ ಬಂದಾಗ, ನನ್ನ ವೇಷ ಧರಿಸಿ ನನ್ನಂತೆಯೇ ಬಂದಿದ್ದನಲ್ಲವೇ?'

'ಅದೆಲ್ಲ ಈಗೇಕೆ? ಮಲಗಿಕೊಳ್ಳಿ.'